ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,ರೋಣ
ಸಿ ಸಿ ನಂಬರ :838/2020
CW-2 PW-1

| | |
|---|---|
| ಹೆಸರು | :ಗುರುರಾಜ ವಸ್ತ್ರದ |
| ತಂದೆಯ ಹೆಸರು | : ಸುರೇಶ |
| ವಯಸ್ಸು | : 37 ವರ್ಷ |
| ಉದ್ಯೋಗ | : ಅಬಕಾರಿ ಉಪನೀರಿಕ್ಷಕರು, ಉಪವಿಭಾಗ – 6 ಬೆಂಗಳೂರು |
| ವಾಸಸ್ಥಳ | : ಬೆಂಗಳೂರು |

---

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 09-02-2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ದಿಃ 12.08.2014 ರಿಂದ 05.02.2024 ರ ವರೆಗೆ ನಾನು ಅಬಕಾರಿ ಪೇದೆ ಎಂದು ಗದಗ ಉಪವಿಭಾಗ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 05.04.2020 ರಂದು ಕೋವಿಡ್ -19 ಸಾಂಕಾ್ರಮಿಕ ರೋಗದ ಕಾರಣ ಲಾಕ್ ಡೌನ್ ಇದ್ದ ಪ್ರಯುಕ್ತ ಅಬಕಾರಿ ಅಕ್ರಮಗಳನ್ನು ಪತ್ತೆ ಹಚ್ಚುವ ನಿಟ್ಟಿನಲ್ಲಿ ನಾನು, ಚಾಸಾ.1, ಮತ್ತು ಚಾಸಾ.7 ರವರು ಸೇರಿಕೊಂಡು ರೋಣ ತಾಲೂಕಿನ ಹೀರೆಹಾಳ ಗ್ರಾಮದಲ್ಲಿ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗೆ ಅಧಿಕಾರಿಗಳಿಗೆ ಮಾಹಿತಿ ಬಂದಿದ್ದು ಆ ಮೇರೆಗೆ ಹಿರಿಹಾಳದಲ್ಲಿ ಇಬ್ಬರು ಪಂಚರನ್ನು ನಮ್ಮೊದಿಗೆ ಸೇರಿಸಿಕೊಂಡು ಸರ್ಕಾರಿ ವಾಹನ ಸಂಖೆ. ಕೆ.ಎ. 26 ಜಿ. 0390 ನೇದ್ದರಲ್ಲಿ ಹೊರಟು ಮುಶಗೇರಿ ಗ್ರಾಮದ ಹತ್ತಿರದ ನೆಲ್ಲೂರು ತಾಂಡಾದ ಕ್ರಾಸ್ ಗೆ ತಲುಪಿದೇವು. ಅಲ್ಲಿಯ ಪೆಟ್ರೋಲ್ ಪಂಪ್ ಹತ್ತಿರ ವಾಹನವನ್ನು ಮರೆಯಲ್ಲಿ ನಿಲ್ಲಿಸಿ ರಸ್ತೆಯ ಗಾವಲು ಕಾರ್ಯ ನಿರ್ವಹಿಸುತ್ತಿರುವಾಗ ಒಂದು ದ್ವಿಚಕ್ರ ವಾಹನ ಬಂದಿದ್ದು ಸವಾರನಿಗೆ ನಿಲ್ಲಿಸಲು ಸೂಚಿಸಲಾಗಿ ಸಮವಸ್ತ್ರದಲ್ಲಿದ್ದ ನಮ್ಮೆಲ್ಲರನ್ನು ಕಂಡು ಗಾಬರಿಗೊಂಡು ನಮ್ಮನ್ನು ದಾಟಿ ವಾಹನವನ್ನು ಬಿಳಿಸಿ ಓಡಿಹೋಗಿದ್ದು ಹಿಡಿಯಲು ಪ್ರಯತ್ನಿಸಲಾಗಿ ಪರಾರಿಯಾಗಿರುತ್ತಾನೆ. ನಂತರ ಆತನು ಬಿಳಿಸಿ ಹೋದ ವಾಹನವನ್ನು ತಪಾಸಣೆ ನಡೆಸಲು ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿ ಶೋಧನೆ ಮಾಡಲಾಗಿ ಅದು ಹೀರೋ ಹೊಂಡಾ ಸ್ಟಂಡರ್ ಪ್ಲಸ್ ವಾಹನವಾಗಿದ್ದು ಅದರ ನೊಂದಣಿ ಸಂಖೆ ಕೆ.ಎ. 26 ಇ.ಸಿ. 4212 ಇದ್ದು ವಾಹನದ ಸೈಡ್ ಬ್ಯಾಗ್ ನಲ್ಲಿ 2 ಲೀಟರಿನ ಎರಡು ಪ್ಲಾಸ್ಟಿಕ್ ಬಾಟಲಿ ನಲ್ಲಿ ಕಳ್ಳಬಟ್ಟಿ ಸರಾಯಿ ಇರುವುದು ಕಂಡು ಬಂದಿದ್ದು ವಾಹನದ ಟ್ಯಾಂಕ್ ಕವರ್ ನಲ್ಲಿ ಆರೋಪಿತನ

ಆಧಾರಕಾರ್ಡ ನ ಜೆರಾಕ್ಸ ಪ್ರತಿ ದೊರೆತಿದ್ದು ಮು.ಮಾ. ವಾಹನ ಮತ್ತು ಸದರಿ ಜೆರಾಕ್ಸ ಪ್ರತಿಯನ್ನು ಅಧಿಕಾರಿಗಳು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡಿರುತ್ತಾರೆ. ಜಪ್ತುಪಡಿಸಿಕೊಂಡು ಸಂಪೂರ್ಣ ಮು.ಮಾ.ಅನ್ನು ಅದೇ ಬಾಟಲ್ ಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರಿಸಿ ಸೀಲ್ ಮಾಡಿ ಅವುಗಳಿಗೆ ಮಾದರಿ ಚೀಟಿ ಅಂಟಿಸಲಾಯಿತು. ನಂತರ ಸದರಿ ಸ್ಥಳದಲ್ಲಿಯೇ ಸಂಜೆ 04.30 ರಿಂದ 05.00 ಗಂಟೆಯ ವರೆಗೆ ಪಂಚನಾಮೆ ಜರುಗಿಸಿ ಮು.ಮಾ. ಹಾಗೂ ವಾಹನದೊಂದಿಗೆ ಕಚೇರಿಗೆ ಬರಲಾಯಿತು. ಈ ಬಗ್ಗೆ ಚಾಸಾ.1 ರವರ ಸಮಕ್ಷಮ ದಿಃ 06.04.2020 ರಂದು ನನ್ನ ಹೇಳಿಕೆಯನ್ನು ದಾಖಲಿಸಿರುತ್ತೇನೆ. ಚಾಸಾ.7 ರವರ ಆದೇಶದಂತೆ ದಿಃ 06.06.2020 ರಂದು ರಾಸಾಯನಿಕ ವಿಶ್ಲೇಷಕರ ಕಚೇರಿ ಧಾರಾವಾಡಕ್ಕೆ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ನೀಡಿರುತ್ತೇನೆ. ದಿಃ 08.06.2020 ರಂದು ರಾಸಾಯನಿಕ ವರದಿ ವಾದರಿಗಳನ್ನು ಪಡೆದು ಚಾಸಾ.7 ರವರಿಗೆ ನೀಡಿರುತ್ತೇನೆ. ಆ ಕುರಿತು ನನ್ನ ಹೇಳಿಕೆಯನ್ನು ಅದೇ ದಿನ ದಾಖಲಿಸಿರುತ್ತೇನೆ.

2. ನಾನು ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು 2 ಪ್ಲಾಸ್ಟಿಕ್ ಬಾಟಲ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ. 1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯಲ್ಲಿರುವ ದಸ್ತೂರು ಎಂದು ಸಹಿ ಮಾಡಿದ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು :1 ನೇ ಆರೋಪಿಯ ಪರ ವಕೀಲರಿಂದಃ** ಶ್ರೀ. ಎಸ್.ಹೆಚ್.ಎ.

ಮುಶಗೇರಿಯಿಂದ ಹನುಮನಾಳು ಮತ್ತು ಗುಡೂರಿಗೆ ಹೋಗುವ ರಸ್ತೆಯಲ್ಲಿ ನೆಲ್ಲೂರು ತಾಂಡಾ ಕ್ರಾಸ್ ಬರುತ್ತದೆ ಎಂದರೆ ಸರಿ. ತಾಂಡಾ ದಾಟಿ ಮುಂದಕ್ಕೆ ಹೋದಾಗ ನೆಲ್ಲೂರು ಗ್ರಾಮ ಬರುತ್ತದೆ ಎಂದರೆ 2 ಕೂಡಿ ಇವೆ ಎಂದು ನುಡಿಯುತ್ತಾರೆ. ನೆಲ್ಲೂರು ತಾಂಡಾ ಕ್ರಾಸ್ ಹತ್ತಿರ ಯಾವುದೇ ಪೇಟ್ರೋಲ್ ಪಂಪ ಇಲ್ಲ ಎಂದರೆ ಸರಿಯಲ್ಲ. ಮುಶಗೇರಿಯಲ್ಲಿ ಪೇಟ್ರೋಲ್ ಪಂಪ್ ಇದೆ ಎಂದರೆ ಸಾಕ್ಷಿಯು ಸದರಿ ಪಂಪ್ ಇರುವ ರಸ್ತೆಯ ಕ್ರಾಸ್ ಗೆ ನೆಲ್ಲೂರು ತಾಂಡಾ ಕ್ರಾಸ್ ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ. ಮುಶಗೇರಿ- ಹನುಮನಾಳಗೆ ಹೋಗುವ ಕ್ರಾಸ್ ಬೇರೆ, ನೆಲ್ಲೂರು ತಾಂಡಾಕ್ಕೆ ಹೋಗುವ ಕ್ರಾಸ್ ಬೇರೆ ಎಂದರೆ ಸರಿಯಲ್ಲ. ನಮ್ಮ ಊರಿಗೆ ಅನುಕೂಲವಾಗಲಿ ಎಂದು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರನ್ನು ಸೇರಿ ನಾವು ಒಟ್ಟು 7 ಜನರು ವಾಹನದಲ್ಲಿ ಇದ್ದೇವು. ಸದರಿ ವಾಹನ 7 ಜನರು ಹೋಗುವ ಸಾಮರ್ಥದ ವಾಹನ ಅಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ವಾಹನ ಚಾಲಕರನ್ನು ಹೊರತುಪಡಿಸಿ ಎಷ್ಟು ಜನ ಇದ್ದೇವು ಎಂದು ನಮೂದಿಸಿರುತ್ತೇವೆ. ನಾವು ಮರೆಯಲ್ಲಿ ನಿಂತಿದ್ದೇವು ಎಂದು

ಹೇಳುವ ರಸ್ತೆಯಲ್ಲಿ ಪೂರ್ವಕ್ಕೆ ಗಜೇಂದ್ರಗಡಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ ಬಾದಾಮಿಗೆ ಹೋಗುವ ರಸ್ತೆ ಇರುತ್ತದೆ, ಉತ್ತರಕ್ಕೆ ಹನುಮನಾಳಗೆ ಹೋಗುವ ರಸ್ತೆ ಹಾಗೂ ದಕ್ಷಿಣಕ್ಕೆ ಇಟಗಿಗೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ಇಟಗಿ ಕಡೆ ಹೋಗುವ ರಸ್ತೆಯಲ್ಲಿ ಆರೋಪಿ ವಾಹನ ಬೀಳಿಸಿ ಓಡಿಹೋದ. ವಾಹನ ಬೀಳಿಸಿದ ಜಾಗೆಯ ಚೆಕ್ ಬಂದಿಯ ಬಗ್ಗೆ ಪಂಚನಾಮೆಯಲ್ಲಿ ಕಾಣಿಸಿಲ್ಲ ಎಂದರೆ ಸರಿ. ಆ ರೀತಿ ಕಾಣಿಸಲು ಯಾವುದೇ ಸಮಸ್ಯೆಯು ಇರಲಿಲ್ಲ ಎಂದರೆ ಸರಿ. ಪಂಚರು ಮುಶಗೇರಿಯವರು. ಅವರು ಯಾವ ಕಾರಣಕ್ಕೆ ಬಂದಿದ್ದರು ಎಂದು ಅಧಿಕಾರಿಗಳು ಕೇಳಿರುತ್ತಾರೆ. ವಾಹನಕ್ಕೂ, ಮು.ಮಾ. ಹಾಗೂ ಆರೋಪಿತನಿಗೂ ಯಾವುದೇ ಸಂಬಂಧ ಇರದಿದ್ದರು ಸುಳ್ಳು ಪಂಚನಾಮೆ ಬರೆದಿದ್ದೇವೆ ಎಂದರೆ ಸರಿಯಲ್ಲ. ಮು.ಮಾ. ರಂತಹ ಬಾಟಲ್ ಗಳು ಹೊರಗಡೆ ಸಿಗುತ್ತವೆ ಎಂದರೆ ಸರಿ. ಬಾಟಲ್ ನಲ್ಲಿ ಕಳ್ಳಬಟ್ಟಿ ಸಾರಾಯಿ ಇದ್ದು, ಅದನ್ನು ವರದಿಗಾಗಿ ಕಳುಹಿಸಿದೇವು ಎಂದು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃಶ್ರೀ ಹೆಚ್.ಬಿ.ಹೆಚ್. 2 ನೇ ಆರೋಪಿ ಪರ ವಕೀಲರಿಂದಃ**

2 ನೇ ಆರೋಪಿಗೆ ನಾವು ನೋಟಿಸು ನೀಡಿದಾಗ 4 ದಿನಗಳ ಹಿಂದೆ ಕಳೆದುಹೋಗಿತ್ತು ಎಂದು 2 ನೇ ಆರೋಪಿ ನಮಗೆ ಉತ್ತರ ಕೊಟ್ಟಿದ್ದೆ ಎಂದರೆ ನನಗೆ ಗೊತ್ತಿಲ್ಲ. ಕೇವಲ 2 ನೇ ಆರೋಪಿತನ ಹೆಸರಿನಲ್ಲಿ ಇದ್ದುದ್ದರಿಂದ ಆತನು ಯಾವುದೇ ತಪ್ಪು ಮಾಡದಿದ್ದರು ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

(ಹುಲುಗಪ್ಪ. ಡಿ )

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.